ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಾವು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡ್ತೀನಿ ಎಂದು ಹೇಳಿದ್ದೀರಿ. ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಶ್ರಿಮಾನ್ ಧರ್ಮಸಿಂಗ್ ಅವರು ಮಾಡಿರತಕ್ಕ ಆಪಾದನೆಯಲ್ಲಿ ಯಾವುದೇ ಹುರುಳಿಲ್ಲ. I repudiate all of them.

(ಗೊಂದಲ)

ಅಧ್ಯಕ್ಷರು.—ನೀವು ನೋಟೀಸ್ ಕೊಡಿ. ಅವಕಾಶ ಕೊಡುವವನು ನಾನು.

ಶ್ರೀ ಎಸ್. ಬಂಗಾರಪ್ಪ.—ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ. ಆದರೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಸರ್ಕಾರವನ್ನು ಡಿಫೆಂಡ್ ಮಾಡಬೇಕಾಗಿದೆ. ಕಾನೂನು ಬಿಟ್ಟುಕೊಟ್ಟು ಹಣವನ್ನು ಕೊಟ್ಟಿರುವ ವಿಚಾರದಲ್ಲಿ ಅವರು ಹುರುಳು ಇಲ್ಲವೆಂದು ಹೇಳಿಬಿಟ್ಟರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಇನ್ನು ನಾಲ್ಕನೇ ಪಟ್ಟಿಯಲ್ಲಿ ಉಳಿದುಕೊಂಡಿದ್ದ ಕ್ಯಾರಿಡ್ ಓವರ್ ಪ್ರಶ್ನೆ ಸಂಖ್ಯೆ ೨೨೯. ಭೂಪತಿಯವರೇ ಪ್ರಶ್ನೆ ಕೇಳಿ.

೨೨೯. ಶ್ರೀ ಯು. ಭೂಪತಿ (ಸಂಡೂರು). ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಾರ್ಮಿಕ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ಬಳ್ಳಾರಿ ಮತ್ತು ಹೊಸಪೇಟೆ ನಡುವೆ ಕಬ್ಬಿಣದ ಅದಿರು ತುಂಬುವ ೩,೫೦೦ ಮಂದಿ ದಿನಗೂಲಿ ಕಾರ್ಮಿಕರ ವಸತಿಗಾಗಿ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು,

(ಆ) ಹೆಚ್ಚಿನ ಸಂಖ್ಯೆಯ ಕಾರ್ಮಿಕರು ರೈಲ್ವೆಯವರ ಸ್ಥಳದಲ್ಲಿ ವಾಸಿಸುತ್ತಿದ್ದು, ಅಲ್ಲಿಂದ ಖಾಲಿ ಮಾಡಲು ಅವರಿಗೆ ತಿಳಿವಳಿಕೆ ಪತ್ರಗಳು ಬಂದಿರುವುದರಿಂದ, ಅವರಿಗೆ ತಕ್ಷಣವೇ ವಸತಿಗಾಗಿ ಜಮೀನನ್ನು ಒದಗಿಸಲಾಗುವುದೇ,

(ಇ) ಹಾಗಿದ್ದಲ್ಲಿ, ವಸತಿ ಸೌಕರ್ಯವನ್ನು ಇನ್ನು ಎಷ್ಟು ಅವಧಿಯಲ್ಲಿ ಪೂರೈಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು),—

(ಅ) ದಿನಗೂಲಿ ಕಾರ್ಮಿಕರಿಗೆ ರಾಜ್ಯ ಸರ್ಕಾರದಲ್ಲಿ ಗೃಹನಿರ್ಮಾಣ ಯೋಜನೆ ಜಾರಿಯಲ್ಲಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಶ್ರೀ ಯು. ಭೂಪತಿ. —ನನಗೆ ಆಶ್ಚರ್ಯ ಏನೆಂದರೆ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇಂದು ನನಗೆ ಬಂದಿರುವ ಮಾಹಿತಿ ಪ್ರಕಾರ ನಾನು ಕೇಳಿರುವ ಪ್ರಶ್ನೆ ಏನಿದೆ, ದಿನಗೂಲಿ ಕಾರ್ಮಿಕರ ವಸತಿ ಸಮಸ್ಯೆ ಬಗ್ಗೆ. ಕಾರ್ಮಿಕ ಇಲಾಖೆಯಲ್ಲಿ ಯಾವ ರೆಕಾರ್ಡ್ ಕೂಡ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಆದ್ದರಿಂದಲೇ ಅವರಿಂದ ಈ ಉತ್ತರ ಬಂದಿದೆ. ಕಬ್ಬಿಣದ ಅದಿರು ತುಂಬುವ ಈ ೩೫೦೦ ಮಂದಿ ದಿನಗೂಲಿ ಕಾರ್ಮಿಕರು ವಾಸ ಮಾಡಲಿಕ್ಕೆ ಜಾಗ ಇಲ್ಲ. ರೈಲ್ವೆಯವರಿಗೆ ಸೇರಿದ ಜಾಗದಲ್ಲಿ ಅವರು ವಾಸ ಮಾಡುತ್ತಿದ್ದಾರೆ. ಜಾಗ ಖಾಲಿ ಮಾಡಿ ಎಂದು ಅವರಿಗೆ ನೋಟೀಸುಗಳು ಬರುತ್ತಿವೆ. ಅವರಿಗೆ ಮುಂದೆ ವಾಸಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎಂದು ಕೇಳಿದರೆ ಸರ್ಕಾರವರು ಇಷ್ಟು ಲಘುವಾಗಿ ಉತ್ತರ ಕೊಡುವುದು ಸರಿಯಲ್ಲ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದಲ್ಲಿ ಇಂತಹ ಯೋಜನೆ ಇಲ್ಲವಾ. ಕೇಂದ್ರ ಸರ್ಕಾರದಲ್ಲಿ ಈ ಯೋಜನೆ ಇದೆ. ತಾವು ಸೈಟುಗಳನ್ನು ಕೊಡಿಸಿದರೆ ಕೇಂದ್ರಕ್ಕೆ ಶಿಫಾರಸು ಮಾಡಿ ಸಾಲವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಕಂಟ್ರಾಕ್ಟ್ ಲೇಬರ್ಸ್ ಬಗ್ಗೆ ನಿಮ್ಮಲ್ಲಿ ದಾಖಲೆ ಇಲ್ಲ. ಲೇಬರ್ ಡಿಪಾರ್ಟ್‌ಮೆಂಟ್ ಅವರು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ಇದರಲ್ಲಿ (ಲೇಬರ್ಸ್) ಅಭಿವೃದ್ಧಿಗಾಗಿ ಯಾವ ಯೋಜನೆಯೂ ಇಲ್ಲ. ಇದರ ಬಗ್ಗೆ ತಾನು ಏನು ಹೇಳುತ್ತೀರಿ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು, ಕೇಳಿರತಕ್ಕಂತಹ ಪ್ರಶ್ನೆ ಕಂಟ್ರಾಕ್ಟ್ ಲೇಬರ್ಸ್‌ಗೆ ಮನೆಗಳನ್ನು ಕಟ್ಟಿಸಿ ಕೊಡಲಾಗಂವುದೇಯೆಂದು ಕೇಳಿದ್ದಿರಿ, ಅಂತಹ ಯೋಜನೆ ರಾಜ್ಯ ಸರ್ಕಾರದಲ್ಲಿಲ್ಲ. ಸೈಟುಗಳನ್ನು ಕೊಡಿಸಿದರೆ, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ ಕಳುಹಿಸಿಕೊಡಲಾಗುತ್ತದೆ. ಕಾರ್ಮಿಕ ಇಲಾಖೆ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ. ವಿಚಾರಣೆ ಮಾಡಿ ತೊಂದರೆಯಿರತಕ್ಕ ಕಾರ್ಮಿಕರಿಗೆ ಸೂಕ್ತ ಪರಿಹಾರ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ನಾನು ಕೇಳುತ್ತೇನೆ ಸೈಟುಗಳನ್ನು ಕೊಡಿಸಿದರೆ ಎಷ್ಟು ದಿವಸದಲ್ಲಿ ಅದನ್ನು ಕಾರ್ಯರೂಪಕ್ಕೆ ತರಂತ್ತೀರಿ. ?

ಶ್ರೀ ಡಿ. ಮಂಜುನಾಥ್.—ಮೊದಲು ಸೈಟುಗಳನ್ನು ಕೊಡಿಸುವ ವ್ಯವಸ್ಥೆಯಾಗಲಿ. ಆಮೇಲೆ ಕೇಂದ್ರ ಸರ್ಕಾರಕ್ಕೆ ನಾವು ಶಿಫಾರಸ್ಸು ಮಾಡಿ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ರಾಜ್ಯದಲ್ಲಿರುವ ಕಾರ್ಮಿಕ ಕಲ್ಯಾಣ ಕೇಂದ್ರಗಳು

೫೩೫. ಶ್ರೀ ಉಸ್ತಾದ್ ಮಹಿಬೂಬ್ ಪಟೇಲ್ (ಬಿಜಾಪುರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ಕಾರ್ಮಿಕ ಕಲ್ಯಾಣ ಕೇಂದ್ರಗಳ ಸಂಖ್ಯೆ ಎಷ್ಟು ?

(ಆ) ಆ ಪೈಕಿ ಎಷ್ಟು ಕಾರ್ಮಿಕ ಕಲ್ಯಾಣ ಕೇಂದ್ರಗಳು ನಡೆಯುತ್ತಿವೆ ಹಾಗೂ ಎಷ್ಟು ನಡೆಯುತ್ತಿಲ್ಲ, (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

(ಇ) ಸದರಿ ಕೇಂದ್ರದ ಕಲ್ಯಾಣಾಧಿಕಾರಿಯನ್ನು ಯಾವ ರೀತಿ ನೇಮಿಸಲಾಗುವುದು ಮತ್ತು ಅವರ ಸೇವಾವಧಿ ಎಷ್ಟು ?

(ಈ) ಕಾರ್ಮಿಕ ಕಲ್ಯಾಣ ನೀತಿ ಏನು ಮತ್ತು ಕಾರ್ಮಿಕ ಕಲ್ಯಾಣಕ್ಕೆ ಸಂಬಂಧಿಸಿದ ಹಣ ಯಾವ ರೀತಿ ವಿನಿಯೋಗವಾಗುತ್ತಿದೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

(ಅ) ಕರ್ನಾಟಕದಲ್ಲಿ ೩೩ ಕಾರ್ಮಿಕ ಕಲ್ಯಾಣ ಕೇಂದ್ರಗಳು ಇದ್ದು ಅವುಗಳಲ್ಲಿ ೨೩ ಕೇಂದ್ರಗಳನ್ನು ಕಾರ್ಮಿಕ ಇಲಾಖೆಯು ಹಾಗೂ ೧೦ ಕೇಂದ್ರಗಳನ್ನು ಕಾರ್ಮಿಕ ಕಲ್ಯಾಣ ಮಂಡಳಿಯು ನಡೆಸುತ್ತಿದೆ.

(ಆ) ಕಾರ್ಮಿಕ ಇಲಾಖೆಯು ನಡೆಸುವ ೨೧ ಕೇಂದ್ರಗಳು ಹಾಗೂ ಕಾರ್ಮಿಕ ಕಲ್ಯಾಣ ಮಂಡಳಿ ನಡೆಸುವ ೧೦ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

೨ ಕಲ್ಯಾಣ ಕೇಂದ್ರಗಳಾದ (೧) ಕಾಟನ್‌ಪೇಟೆ ಮತ್ತು ಚಾಮರಾಜಪೇಟೆ ಬೆಂಗಳೂರು ನಡೆಯುತ್ತಿಲ್ಲ.

(ಇ) ಕಾರ್ಮಿಕ ಇಲಾಖೆ ನಡೆಸುತ್ತಿರುವ ಕಲ್ಯಾಣ ಕೇಂದ್ರಗಳನ್ನು ಕಾರ್ಮಿಕ ಆಧಿಕಾರಿಗಳು ನೋಡಿಕೊಳ್ಳುತ್ತಿದ್ದು ಇವರ ಸೇವಾ ನಿಯಮಗಳು ಕೆಸಿಎಸ್‌ಆರ್‌ನಿಂದ ನಿಯಂತ್ರಿಸಲ್ಪಡುತ್ತವೆ. ಕಾರ್ಮಿಕ ಕಲ್ಯಾಣ ಮಂಡಳಿ ನಡೆಸುತ್ತಿರುವ ಕೇಂದ್ರಗಳ ಸಿಬ್ಬಂದಿಯನ್ನು ಕಾರ್ಮಿಕ ಕಲ್ಯಾಣ ಆಯುಕ್ತರು ನಿರ್ದೇಶಿಸಿರುತ್ತಾರೆ. ಹಾಗೂ ಆಯ್ಯೆಯು ಮಂಡಳಿಯ ಒಪ್ಪಿಗೆಯನ್ನು ಪಡೆದಿರುತ್ತದೆ ಮತ್ತು ವೀಸಲಾತಿ ಕಾಯ್ದಿರಿಸುವಿಕೆ ನಿಯಮದಂತೆ ಮಾಡಲ್ಪಟ್ಟಿವೆ. ಈ ಸಿಬ್ಬಂದಿಯು ಸಹ ಕೆಸಿಎಸ್‌ಆರ್‌ನಿಂದ ನಿಯಂತ್ರಿಸಲ್ಪಡುತ್ತದೆ.